**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.**

**ಪ್ರಕರಣ ಸಂಖ್ಯೆಃ ಸ್ಪೆಷಲ್ ಎಸ್.ವಿ.ಸಿ.4/2018**

ಅ.ಸಾ ಃ 1

ದೋಸಾ ಃ 1

ಸಾಕ್ಷಿದಾರರ ಹೆಸರು ಃ ಬಸವರಾಜ ಮೆಳ್ಳಾಗಟ್ಟಿ

ತಂದೆಯ ಹೆಸರು ಃ ಗುರುಪಾದಪ್ಪ

ವಯಸ್ಸು ಃ 36 ವರ್ಷ

ಉದ್ಯೋಗ ಃ ಕೂಲಿ ಕೆಲಸ

ವಾಸ ಸ್ಥಳ ಃ ಮೂಕಬಸರಿಕಟ್ಟಿ

ದಿನಾಂಕಃ**19/04/2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಪ್ರಾಜ್ಞ ವಿಶೇಷ ಸರ್ಕಾರಿ ಅಭಿಯೋಜಕರಿಂದಃ –**

1. ಆರೋಪಿ ಪರಿಚಯ ಇಲ್ಲ. ನಮ್ಮೂರಲ್ಲಿ ಸರ್ವೆ ನಂ-15/4 ರಲ್ಲಿ 2 ಎಕರೆ 14 ಗುಂಟೆ ಜಮೀನಿರುತ್ತದೆ. ನಮ್ಮ ತಂದೆ ಎಲ್ಲರೂ ಒಟ್ಟಿಗೆ ಇದ್ದಾಗ ಸದರಿ ಜಮೀನಿಗೆ 2014 ರಲ್ಲಿ ಕೊಳವೆಬಾವಿ ಕೊಡಿಸಿದ್ದರು. ನಮ್ಮ ದೊಡ್ಡಪ್ಪ ಕೊಳವೆಬಾವಿಗೆ ವಿದ್ಯುತ್ ಸಂಪರ್ಕ ಮಾಡಿಸಲು ಬಂಕಾಪುರದ ಕೆಇಬಿ ಕಛೇರಿಗೆ ಕರೆದುಕೊಂಡು ಹೋಗಿದ್ದರು. ಕೆಇಬಿ ಕಛೇರಿಯಲ್ಲಿ ರೂ.16,400/- ಹಣ ಜಮಾ ಮಾಡಿದೆವು. ಕೆಇಬಿಯವರು ವಿದ್ಯುತ್ ಸಂಪರ್ಕ ಕೊಳವೆಬಾವಿಗೆ ಕೊಡಲಿಲ್ಲ. ನಾನು ಒಂದೇ ಬಾರಿ ಕೆಇಬಿ ಕಛೇರಿಗೆ ಹೋಗಿದ್ದೆ.

2. ನಮ್ಮ ದೊಡ್ಡಪ್ಪ ನನ್ನ ಹೆಸರಿನಲ್ಲಿ ದೂರು ಮಾಡಿದ್ದರು. ಸಾಕ್ಷಿ ದೂರಿನ ಮೇಲೆ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ-1, ಸಾಕ್ಷಿ ಸಹಿ ನಿಪಿ-1(ಎ) ಅಂತಾ ಗುರುತಿಸಲಾಯಿತು. ನಿಪಿ-1 ರ ವಿಷಯ ನನಗೆ ಗೊತ್ತಿಲ್ಲ. ನನ್ನ ತಂದೆ ಮುಂಚೆ ತೀರಿಕೊಂಡಿದ್ದರು. ನಮ್ಮ ದೊಡ್ಡಪ್ಪ ಕೆಇಬಿ ಕಛೇರಿಗೆ ಓಡಾಡುತ್ತಿದ್ದರು. ನಾನು 1 ನೇ ಆರೋಪಿ ಜೊತೆ ಯಾವುದೇ ಮಾತುಕತೆ ಸಂಭಾಷಣೆ ಮಾಡಿಲ್ಲ. ನಮ್ಮೂರಲ್ಲಿ ಕೆಇಬಿ ಲೈನಮನ್ ಪಾಟೀಲ ಅನ್ನುವವರು ಇದ್ದರು. ಅವರು ತೀರಿಕೊಂಡಿರುತ್ತಾರೆ.

3. ದಿನಾಂಕಃ09/08/2017 ರ ವಹಿಸುವಿಕೆ ಪಂಚನಾಮೆಯ ಮೇಲೆ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2, ಸಾಕ್ಷಿ ಸಹಿ ನಿಪಿ-2(ಎ) ಅಂತಾ ಗುರುತಿಸಲಾಯಿತು. ನಿಪಿ-2 ರ ವಿಷಯ ನನಗೆ ಗೊತ್ತಿಲ್ಲ. ಕೆಇಬಿ ಕಛೇರಿಗೆ ಹೋದಾಗ ನಿಪಿ-2 ಕ್ಕೆ ಸಹಿ ಮಾಡಿರುತ್ತೇನೆ. ಅದರಲ್ಲಿ ಎನು ವಿಷಯ ಬರೆದಿದೆ ಗೊತ್ತಿಲ್ಲ.

4. ಪೊಲೀಸರು ನಮ್ಮ ಜಮೀನಿನಲ್ಲಿ ಪಂಚನಾಮೆ ಮಾಡಿ, ನನ್ನ ಸಹಿ ಪಡೆದಿರುತ್ತಾರೆ. ಸದರಿ ಪಂಚನಾಮೆಯನ್ನು ನಿಪಿ-3, ಸಾಕ್ಷಿ ಸಹಿ ನಿಪಿ-3(ಎ) ಅಂತಾ ಗುರುತಿಸಲಾಯಿತು. ನಿಪಿ-3 ರ ವಿಷಯ ನನಗೆ ಗೊತ್ತಿಲ್ಲ. ದಿನಾಂಕಃ09/08/2017 ರ ಟ್ರ್ಯಾಪ್ ಪಂಚನಾಮೆಯ ಮೇಲೆ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-4, ಸಾಕ್ಷಿ ಸಹಿ ನಿಪಿ-4(ಎ) ಅಂತಾ ಗುರುತಿಸಲಾಯಿತು. ನಿಪಿ-4 ರ ವಿಷಯ ನನಗೆ ಗೊತ್ತಿಲ್ಲ.

(ಮಾನ್ಯ ವಿಸಅ ರವರು ಬಣ್ಣದ ಪೋಟೋಗಳನ್ನು ಗುರುತಿಸಲು ಮನವಿ ಮಾಡಿರುತ್ತಾರೆ. ಆರೋಪಿ ಪರ ವಕೀಲರಾದ ಶ್ರೀ ಯು.ಎನ್.ಜಿ. ವಕೀಲರು ಬಣ್ಣದ ಪೋಟೋಗಳು, ಸಿ.ಡಿ., ಪೆನಡ್ರೈವ ಮತ್ತು ನೆಗೆಟಿವ್ ಗಳನ್ನು ಹಾಜರುಪಡಿಸದೇ ಇರವುದರಿಂದ ಅವುಗಳನ್ನು ಗುರುತಿಸಲು ತಕರಾರು ಎತ್ತಿರುತ್ತಾರೆ. ಬಣ್ಣದ ಪೋಟೋಗಳು ಪ್ರಾಥಮಿಕ ಸಾಕ್ಷ್ಯ ಆಗುವುದಿಲ್ಲ. ತನಿಖಾಧಿಕಾರಿ ಬಣ್ಣದ ಪೋಟೋಗಳ ಪೂರಕವಾಗಿ ಸಿ.ಡಿ., ಪೆನಡ್ರೈವ ಮತ್ತು ನೆಗೆಟಿವ್ ಮತ್ತು ಕಲಂ-65(ಬಿ) ಸಾಕ್ಷ್ಯ ಅಧಿನಿಯಮ ಅಡಿಯಲ್ಲಿ ಪ್ರಮಾಣ ಪತ್ರ ಕೊಟ್ಟಿರುವುದಿಲ್ಲ. ಆದ್ದರಿಂದ ಅವುಗಳನ್ನು ಗುರುತಿಸಬೇಕೆಂಬ ಮಾನ್ಯ ವಿಸಅ ರವರ ಮನವಿಯನ್ನು ತಳ್ಳಿಹಾಕಲಾಯಿತು.)

(ಈ ಹಂತದಲ್ಲಿ ಸಾಕ್ಷಿಯು ನೀಡಿರುವ ಹೇಳಿಕೆ ಹಾಗೂ ಸಾಕ್ಷಿಯ ಮುಖ್ಯ ವಿಚಾರಣೆಯನ್ನು ಪರಿಶೀಲಿಸಿ, ಅವು ಪರಸ್ಪರ ವ್ಯತಿರಿಕ್ತವಾಗಿರುವುದರಿಂದ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಕೋರಿದ್ದು ಮತ್ತು ಈ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಪ್ರಾಜ್ಞ ಸರ್ಕಾರಿ ಅಭಿಯೋಜಕರು ಕೋರಿದ್ದರಿಂದ ಅನುಮತಿಸಲಾಗಿದೆ.)

## ಪಾಟೀ ಸವಾಲುಃ ಪ್ರಾಜ್ಞ ಸರ್ಕಾರಿ ಅಭಿಯೋಜಕರಿಂದಃ –

5. ದಿನಾಂಕಃ9/8/2017 ರಂದು ನಿಪಿ-1 ರಂತೆ ದೂರು ಕೊಟ್ಟು, ನಾನು ಅದರಲ್ಲಿ ಬಂಕಾಪುರದ ಶಾಖಾಧಿಕಾರಿ 1 ನೇ ಆರೋಪಿ ಮತ್ತು ಲೈನಮನ್ ಪಾಟೀಲ ಅವರಿಗೆ ವಿದ್ಯುತ್ ಸಂಪರ್ಕ ಕೊಳವೆಬಾವಿಗೆ ಕೊಡಲು ಕೇಳಿದಾಗ ಅವರು ಬೋರವೆಲ್ ಗೆ ಟಿಸಿಯಿಂದ ಸಂಪರ್ಕ ಕೊಡಲು ರೂ.6,000/- ಹಣ ಕೇಳಿದರು, ಅಷ್ಟೊಂದು ಆಗಲ್ಲ ಅಂದಿದ್ದಕ್ಕೆ ರೂ.5,000/- ಕೊಡಬೇಕು ಅಂತಾ ಕೇಳಿದ್ದಕ್ಕೆ ನಾನು 2-3 ದಿನ ಬಿಟ್ಟು ಅಡ್ಜಸ್ಟ ಮಾಡಿಕೊಂಡು ಬರುತ್ತೇನೆ ಎಂದು ಹೇಳಿದೆ ಎಂದು ನಿಪಿ-1 ರಲ್ಲಿ ಹೇಳಿ ಬರೆಸಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ.

6. ದಿನಾಂಕ:7/8/2017 ರಂದು ಮಧ್ಯಾಹ್ನ 2-00 ಘಂಟೆಗೆ ಬಂಕಾಪುರ ಕೆಇಬಿಯ ಶಾಖಾಧಿಕಾರಿ 1ನೇ ಆರೋಪಿ ಲೈನಮನ್ ಗೆ ಫೋನ್ ಮಾಡಿ, ಜಾಸ್ತಿ ಅಡ್ಡಾಡಿಸುವುದು ಬೇಡ ರೂ.3,000/- ಇಸಿದುಕೊಂಡು ಕೆಲಸ ಮಾಡಿಕೊಡು ಅಂತಾ ಹೇಳಿದರು ಮತ್ತು 1ನೇ ಆರೋಪಿ ನನಗೆ ರೂ.3,000/- ವನ್ನು 2 ನೇ ಆರೋಪಿಯ ಕೈಯಲ್ಲಿ ಕೊಡು ಅಂತಾ ಹೇಳಿದರು ಮತ್ತು ಆ ಸಂಭಾಷಣೆ ಯು ಮೊಬೈಲನಲ್ಲಿ ರೆಕಾರ್ಡ ಆಗಿರುತ್ತದೆ ಅಂತಾ ನಿಪಿ-1 ದೂರಿನಲ್ಲಿ ಬರೆಸಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ.

7. ದಿನಾಂಕ:7/8/2017 ರಂದು ಮಧ್ಯಾಹ್ನ 3-00 ಘಂಟೆಗೆ ಬಂಕಾಪುರದ 2ನೇ ಅರೋಪಿ ಇವರ ಮನೆಗೆ ಹೋಗಿದ್ದು, ಅಲ್ಲಿ ಮೊಬೈಲ್ ಫೋನ ರೆಕಾರ್ಡರ ಆನ್ ಮಾಡಿಕೊಂಡು ನನ್ನ ಕೆಲಸದ ಬಗ್ಗೆ ವಿಚಾರಿಸಿದೆ, ಆಗ ಅವರು ರೂ.6,000/- ಲಂಚದ ಹಣ ಬೇಡಿಕೆ ಇಟ್ಟರು, ಅಪ್ಪೊಟ್ಟಂದು ಹಣ ಇಲ್ಲ 2 ದಿನ ಬಿಟ್ಟು ಕೊಡುತ್ತೆನೆ ಅಂತಾ ಹೇಳಿದ್ದಕ್ಕೆ, ಟಿಸಿ ಚಾರ್ಜ ಮಾಡಿಸುತ್ತೇನೆ, ದುಡ್ಡು ಕೊಟ್ಟ ಮೇಲೆ ಕೊಳವೆಬಾವಿಗೆ ಲೋಡ ಹಾಕಿಸಿಕೊಡುತ್ತೇನೆ ಅಂತಾ ಹೇಳಿ, ದಿನಾಂಕ:8/8/2017 ರಂದು ಟಿಸಿ ಚಾರ್ಜ ಮಾಡಿದ್ದು ಕೊಳವೆ ಬಾವಿಗೆ ವಿದ್ಯುತ್ ಸಂಪರ್ಕ ಕೊಟ್ಟಿರುವುದಿಲ್ಲ ಮತ್ತು ನಾನು ಅವನಿಗೆ ಲಂಚದ ಹಣ ರೂ.4,000/- ಕೊಟ್ಟಿರುವುದಿಲ್ಲ ಎಂದು ನಿಪಿ-1 ರಲ್ಲಿ ಬರೆಸಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ.

8. ಆರೋಪಿ 1 ಮತ್ತು 2 ರವರು ರೂ.4,000/- ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದು, ನನಗೆ ಹಣ ಕೊಡಲು ಇಷ್ಟವಿಲ್ಲದ್ದಕ್ಕೆ ಎಸಿಬಿ ಕಛೇರಿಗೆ ಹೋಗಿ ದೂರು ಕೊಟ್ಟಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ.

9. ದಿನಾಂಕ:9/8/2017 ಮಧ್ಯಾಹ್ನ 2-30 ರಿಂದ ಮಧ್ಯಾಹ್ನ 4-30 ಘಂಟೆವರೆಗೆ ನಮ್ಮ ಮತ್ತು ಪಂಚರ ಸಮಕ್ಷಮ ಎಸಿಬಿ ಪೊಲೀಸರು ದೂರಿನ ವಿಷಯವನ್ನು ಎಲ್ಲ ಓದಿ ಹೇಳಿದರು ಮತ್ತು ನಿಪಿ-2 ರಂತೆ ವಹಿಸುವಿಕೆ ಪಂಚನಾಮೆಯನ್ನು ತಯಾರಿಸಿದರು ಎಂದು ಸೂಚಿಸುವುದು ಸರಿಯಲ್ಲ. ನಿಪಿ-2 ವಹಿಸುವಿಕೆ ಪಂಚನಾಮೆಯಲ್ಲಿ ಸಾಕ್ಷಿ ಮತ್ತು 1ನೇ ಆರೋಪಿಯ 4-48 ಸೆಕೆಂಡ ಸಂಭಾಷಣೆಯ ವಿವರವನ್ನು ನಮೂದಿಸಿದರು ಎಂದು ಸೂಚಿಸುವುದು ಸರಿಯಲ್ಲ. ನಂತರ, ತನಿಖಾಧಿಕಾರಿ ಸಾಕ್ಷಿಗೆ ರೂ.4,000/-ನ್ನು 1ನೇ ಆರೋಪಿಗೆ ಕೊಡಲು ಹಣವನ್ನು ಹಾಜರುಪಡಿಸಿದರು ಮತ್ತು ಅದು ರೂ.2000/- ಮುಖಬೆಲೆಯ 1 ನೋಟು ಮತ್ತು ರೂ.500/- ಮುಖಬೆಲೆಯ 4

ನೋಟುಗಳು ಇದ್ದು, ಅವುಗಳನ್ನು ಕೂಡ ಪಂಚನಾಮೆಯಲ್ಲಿ ವಿವರವಾಗಿ ಬರೆದು ತೋರಿಸಿದರು ಎಂದು ಸೂಚಿಸುವುದು ಸರಿಯಲ್ಲ.

10. ಲೋಕಾಯುಕ್ತ ಪೊಲೀಸರು ನಮ್ಮ ಸಮಕ್ಷಮ ಅಲ್ಮೇರಾದಲ್ಲಿದ್ದ ಫಿನಾಪ್ತಲಿನ್ ಪೌಡರ ಮತ್ತು ಸೋಡಿಯಂ ಕಾರ್ಬೋನೇಟ್ ಡಬ್ಬಿಗಳನ್ನು ಹೊರತಂದು ಅವುಗಳನ್ನು ಲಂಚದ ಹಣದ ನೋಟುಗಳ ಮೇಲೆ 2 ಮಗ್ಗಲುಗಳಿಗೆ ತೆಳುವಾಗಿ ಸವರಿದರು, ಮತ್ತು ಗಾಜಿನ ಬಾಟಲನಲ್ಲಿ ದ್ರಾವಣ ವನ್ನು ತಯಾರಿಸಿದರು, ಬಾಟಲನಲ್ಲಿ ದ್ರಾವಣವನ್ನು ಬಟ್ಟೆ ಕಟ್ಟಿ ಅರಗು ಸೀಲು ಮಾಡಿ ಜಪ್ತಿ ಮಾಡಿ ಪಂಚನಾಮೆ ತಯಾರಿಸಿದರು ಎಂದು ಸೂಚಿಸುವುದು ಸರಿಯಲ್ಲ.

11. ನಂತರ ಪಂಚ 2 ನೇದವರಿಗೆ ಪಿರ್ಯಾದಿಯ ಶರ್ಟ ಮತ್ತು ಪ್ಯಾಂಟನಲ್ಲಿ ಇಟ್ಟ ರೂ.100/- ರೂಪಾಯಿ 2 ನೋಟುಗಳನ್ನು ಮತ್ತು ಮುಖಕವಚ ಮತ್ತು ಲಾವಾ ಕಂಪನಿಯ ಮೊಬೈಲ್ ಅವುಗಳನ್ನು ಅಲ್ಲಿಯೇ ಬಿಟ್ಟು, ಶರ್ಟ ಜೇಬು ಖಾಲಿ ಮಾಡಿಸಿ ಪಂಚನಾಮೆ ಬರೆದರು ಎಂದು ಸೂಚಿಸುವುದು ಸರಿಯಲ್ಲ. 2 ನೇ ಪಂಚ ಫಿನಾಪ್ತಲಿನ್ ಪೌಡರ ಸವರಿದ ಸಾಕ್ಷಿಯ ಎಡಜೇಬಿನಲ್ಲಿರಿಸಿ ಸೋಡಿಯಂ ಕಾರ್ಬೋನೇಟ್ ದ್ರಾವಣ ಇದ್ದ ಬಟ್ಟಲಿನಲ್ಲಿ ಎರಡೂ ಕೈಗಳ ಹಸ್ತರದ ಬೆರಳುಗಳನ್ನು ಅದ್ದಿ ತೊಳೆದಾಗ, ಅದು ಬಣ್ಣರಹಿತ ದ್ರಾವಣ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಯಿತು, ಆ ಬಗ್ಗೆ ನಡೆದ ರಾಸಾಯನಿಕ ಕ್ರಿಯೆಯನ್ನು ನಮ್ಮ ಸಮಕ್ಷಮ ಪೊಲೀಸರು ನಮಗೆ ಮತ್ತು ಪಂಚರಿಗೆ ತಿಳಿಸಿದರು ಎಂದು ನಿಪಿ-2 ರಲ್ಲಿ ನಮೂದಿಸಲಾಗಿದೆ ಎಂದು ಸೂಚಿಸುವುದು ಸರಿಯಲ್ಲ. ಪರಿವರ್ತನೆಯಾದ ದ್ರಾವಣವನ್ನು ಗಾಜಿನ ಬಟ್ಟಲಿನಲ್ಲಿ ಹಾಕಿ ಮುಚ್ಚಳದಿಂದ ಭದ್ರಪಡಿಸಿ ಅರಗು ಹಾಕಿ ಜಪ್ತಿ ಮಾಡಲಾಯಿತು ಎಂದು ಸೂಚಿಸುವುದು ಸರಿಯಲ್ಲ.

12. ಪಂಚ ಸಾಕ್ಷಿಗಳು ಸಾಕ್ಷಿ ಮತ್ತು 1 ನೇ ಅರೋಪಿಯ ಸಂಭಾಷಣಯನ್ನು ಕೇಳಿಸಿಕೊಂಡು ವಿದ್ಯಮಾನಗಳನ್ನು ಗಮನಿಸಿ ಆ ಬಗ್ಗೆ ವರದಿ ಮಾಡಬೇಕೆಂದು ಸೂಚನೆ ನೀಡಿದ ಬಗ್ಗೆ ಮತ್ತು ಸೋನಿ ಕಂಪನಿಯ ವಾಯ್ಸ್ ರೆಕಾರ್ಡರನ್ನು ಸಾಕ್ಷಿಗೆ ನೀಡಿ ಅದನ್ನು ಆನ್ ಮಾಡಿಕೊಂಡು ಹೋಗಲು ತಿಳಿಸಿದ ಬಗ್ಗೆ ನಿಪಿ-2 ರಲ್ಲಿ ನಮೂದಿಸಲಾಗಿದೆ ಎಂದು ಸೂಚಿಸುವುದು ಸರಿಯಲ್ಲ. 1 ರಿಂದ 4 ವಸ್ತುಗಳನ್ನು ತನಿಖಾಧಿಕಾರಿ ಜಪ್ತಿಮಾಡಿ ನಿಪಿ-2 ರ ಅಡಿಯಲ್ಲಿ ಪಂಚನಾಮೆ ತಯಾರಿಸಿ ಪೋಟೋ ತೆಗೆಸಿದರು ಎಂದು ಸೂಚಿಸುವುದು ಸರಿಯಲ್ಲ.

13. ದಿನಾಂಕಃ9/8/2017 ರಂದು ಮಧ್ಯಾಹ್ನ 4-50 ಕ್ಕೆ ಎಸಿಬಿ ಪೊಲೀಸ್ ಠಾಣೆ, ಹಾವೇರಿಯಿಂದ ಖಾಸಗಿ ಜೀಪಿನಲ್ಲಿ ಬಂಕಾಪುರಕ್ಕೆ ಬಂದು ಹೊರವಲಯದಲ್ಲಿ 2 ನೇ ಆರೋಪಿಗೆ ಫೋನ್ ಮಾಡಿದೆವು ಎಂದು ಸೂಚಿಸುವುದು ಸರಿಯಲ್ಲ. ಆಗ ವೇಳೆ 5-15 ಘಂಟೆಯಾಗಿತ್ತು. ನಂತರ ನಾವು ಮತ್ತು ಪಂಚರು 2 ನೇ ಆರೋಪಿ ಮನೆಗೆ ಸಂಜೆ 5-35 ಕ್ಕೆ ಹೋಗಿ ಹಣ ಕೊಡಲು ಹೋದಾಗ, 2 ನೇ ಆರೋಪಿ ನಾನು ದುಡ್ಡು ತೆಗೆದುಕೊಳ್ಳುವುದಿಲ್ಲ, ಮೇಲಾಧಿಕಾರಿಗೆ ಹೋಗಿ ಕೊಡು ಮತ್ತು ಎಷ್ಟು ಹಣ ಇದೆ ಅಂತಾ ಕೇಳಿದಾಗ ರೂ.4,000/- ಹಣ ಇದೆ ಅಂತಾ ಟೇಬಲ್ ತೋರಿಸಿ ಇಲ್ಲಿಡು ಅಂತಾ ಹೇಳಿದನು ಅಂತಾ ನಿಪಿ-4 ರಲ್ಲಿ ನಮೂದಿಸಲಾಗಿದೆ ಎಂದು ಸೂಚಿಸುವುದು ಸರಿಯಲ್ಲ.

14. ನಾನು ನನ್ನ ಶರ್ಟಿನ ಎಡಕಿಸೆಯಲ್ಲಿದ್ದ ರೂ.4,000/- ಲಂಚದ ಹಣವನ್ನು ಟೇಬಲ್ ಮೇಲಿಟ್ಟು ಹೊರಟೆ , 2 ನೇ ಆರೋಪಿ ನಮಗೆ ಯಾರನ್ನೋ ಕರೆದುಕೊಂಡು ಬಂದರೆ ಜಂಪ ಹಾಕಲು ಬರುವುದಿಲ್ಲ, ಚಾರ್ಜ ಮಾಡಲು ಬರುವುದಿಲ್ಲ ಅಂತಾ ಬೈಕ ಹತ್ತಿ ಮೇನ ರೋಡ ಕಡೆಗೆ ಹೋದರು ಅಂತಾ ನಿಪಿ-4 ರಲ್ಲಿ ನಮೂದಿಸಲಾಗಿದೆ ಎಂದು ಸೂಚಿಸುವುದು ಸರಿಯಲ್ಲ. ನಂತರ ಪುನಃ ನಾನೇ 2 ನೇ ಆರೋಪಿಗೆ ಫೋನ್ ಮಾಡಿ ನಾನು, ಪಂಚರು ಮತ್ತು ಪೊಲೀಸರು ಕೆಇಬಿ ಕಛೇರಿಗೆ ಹೋದಾಗ ಸಂಜೆ 6-15 ಆಗಿತ್ತು ಎಂದು ಸೂಚಿಸುವುದು ಸರಿಯಲ್ಲ.

15. ನಂತರ ಸಾಕ್ಷಿ, ಪೊಲೀಸರು ಮತ್ತು ಪಂಚರು 2 ನೇ ಆರೋಪಿಗೆ ಕೆಇಬಿ ಕಛೇರಿಯಲ್ಲಿ ದೂರಿನ ವಿಷಯ ತಿಳಿಸಿ, ಲಂಚದ ಹಣ ಕೇಳಿದಾಗ ನನ್ನ ಹತ್ತಿರ ದುಡ್ಡು ಇಲ್ಲ ಅಂತಾ ಹೇಳಿದ್ದು ಮತ್ತು ಪುನಃ ಕೇಳಿದಾಗ ಮನೆಯಲ್ಲಿ ಟೇಬಲ್ ಮೇಲೆ ಇದೆ ಅಂತಾ ಹೇಳಿದರು ಎನ್ನುವ ವಿಷಯವನ್ನು ನಿಪಿ-4 ರಲ್ಲಿ ನಮೂದಿಸಲಾಗಿದೆ ಎಂದು ಸೂಚಿಸುವುದು ಸರಿಯಲ್ಲ. ಪಂಚರು ಮತ್ತು ನಮ್ಮ ಸಮಕ್ಷಮ ಎಸಿಬಿ ಪೊಲೀಸರು ಸೋಡಿಯಂ ಕಾರ್ಬೊನೇಟ್ ದ್ರಾವಣ ತಯಾರಿಸಿ ಸೀಲು ಮಾಡಿ ಜಪ್ತಿಮಾಡಿದರು ಎಂದು ಸೂಚಿಸುವುದು ಸರಿಯಲ್ಲ.

16. ಸದರಿ ಸೋಡಿಯಂ ಕಾರ್ಬೊನೇಟ್ ದ್ರಾವಣದಲ್ಲಿ 2 ನೇ ಆರೋಪಿಯ ಎಡಗೈ ಅದ್ದಿ ತೊಳೆದಾಗ ಸೋಡಿಯಂ ಕಾರ್ಬನೋಟ್ ದ್ರಾವಣವು ಯಾವುದೇ ರೀತಿ ಬಣ್ಣ ಬದಲಾವಣೆಯಾಗಲಿಲ್ಲ ಅಂತಾ ನಿಪಿ-4 ರಲ್ಲಿ ನಮೂದಿಸಲಾಗಿದೆ ಎಂದು ಸೂಚಿಸುವುದು ಸರಿಯಲ್ಲ. ತನಿಖಾಧಿಕಾರಿಗಳು 2 ನೇಲ ಆರೋಪಿ ಕಡೆಯಿಂದ ಬೈಕ್ ಕೀ, ಗುಟ್ಕಾ, ಕರವಸ್ತ್ರ, ಗಾಮಾ ಕಂಪನಿಯ ಮೊಬೈಲ್ ಚೆಕ್ ಮಾಡಿ ನಂತರ

ವಾಪಾಸು ಕೊಟ್ಟು ಸ್ವೀಕೃತಿ ಪಡೆದಿರುತ್ತಾರೆ ಅಂತಾ ನಿಪಿ-4 ರಲ್ಲಿ ನಮೂದಿಸಲಾಗಿದೆ ಎಂದು ಸೂಚಿಸುವುದು ಸರಿಯಲ್ಲ.

17. ಎಸಿಬಿ ಅಧಿಕಾರಿಗಳು 2 ನೇ ಆರೋಪಿ ಕಲಂಚದ ಹಣ ಮನೆಯಲ್ಲಿಟ್ಟಿದ್ದಾನೆ ಅಂತಾ ಹೇಳಿದ್ದಕ್ಕೆ ಎಲ್ಲರೂ ಸಾಕ್ಷಿ ಮತ್ತು ಪಂಚರೊಂದಿಗೆ 2 ನೇ ಆರೋಪಿಯ ಮನೆಯ ಕಟ್ಟಿಗೆ ಟೇಬಲ್ ಮೇಲೆ ಹಳದಿ ಪ್ಲಾಸ್ಟಿಕ್ ಚೀಲದಲ್ಲಿ ರೂ.4,000/- ಇದ್ದು ಅದರಲ್ಲಿ ರೂ.2,000/- ಮುಖಬೆಲೆಯ 1 ನೋಟು ಮತ್ತು ರೂ.500/- ಮುಖಬೆಲೆಯ 4 ನೋಟುಗಳನ್ನು 2 ನೇ ಆರೋಪಿ ಹಾಜರುಪಡಿಸಿದ್ದು, ಅವುಗಳನ್ನು ಪೊಲೀಸರು ಜಪ್ತಿಮಾಡಿ ನಿಪಿ-4 ರಂತೆ ಪಂಚನಾಮೆ ತಯಾರಿಸಿದರು ಎಂದು ಸೂಚಿಸುವುದು ಸರಿಯಲ್ಲ.

18. ಸದರಿ ನೋಟುಗಳನ್ನು ಒಂದು ಕವರನಲ್ಲಿ ಹಾಕಿ ಸೀಲು ಮಾಡಲಾಯಿತು ಎಂದು ಸೂಚಿಸುವುದು ಸರಿಯಲ್ಲ. ಸದರಿ ಪಂಚನಾಮೆ ಕಾಲಕ್ಕೆ ಜಪ್ತುಮಾಡಿದ ಸೋಡಿಯಂ ಕಾರ್ಬೊನೇಟ್ ಪುಡಿಯನ್ನು ಬೆರೆಸಿ ಸೋಡಿಯಂ ಕಾರ್ಬೊನೇಟ್ ದ್ರಾವಣ ತಯಾರಿಸಿದ್ದು, ಅದನ್ನು ಕೂಡ ಜಪ್ತು ಮಾಡಲಾಯಿತು ಎಂದು ಸೂಚಿಸುವುದು ಸರಿಯಲ್ಲ. ಟೇಬಲ್ ಮೇಲೆ ಲಂಚದ ಹಣ ಇಟ್ಟಿದ್ದ ಜಾಗವನ್ನು ಒರೆಸಿ, ಸೋಡಿಯಂ ಕಾರ್ಬೊನೇಟ್ ದ್ರಾವಣದಲ್ಲಿ ಅದ್ದಿದಾಗ ಅದು ತಿಳಿಗುಲಾಬಿ ಬಣ್ಣಕ್ಕೆ ಬದಲಾಯಿತು, ಅದನ್ನು ಸ್ಯಾಂಪಲ್‌ಗಾಗಿ ಗಾಜಿನ ಬಾಟಲಿನಲ್ಲಿ ಶೇಖರಿಸಿ, ಮುಚ್ಚಿ ಸೀಲು ಮಾಡಿ ಜಪ್ತಿ ಮಾಡಲಾಯಿತು ಎಂದು ಸೂಚಿಸುವುದು ಸರಿಯಲ್ಲ.

19. ಟೇಬಲ್ ಮೇಲೆ ಇಟ್ಟಿದ್ದ ಲಂಚದ ಹಣದ ಮೇಲೆ ಮುಚ್ಚಿದ ಪ್ಲಾಸ್ಟಿಕ್ ಹಳದಿ ಬಣ್ಣದ ಹ್ಯಾಂಡ ಕವರನ್ನು ತನಿಖಾಧಿಕಾರಿ ಪಡೆದು ಅದನ್ನು ಕೂಡ ಜಪ್ತುಮಾಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಸ್ಥಳದಲ್ಲಿ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಪಂಚನಾಮೆಯನ್ನು ರಾತ್ರಿ 8-00 ರಿಂದ 8-10 ಕ್ಕೆ ಬರೆದು ಪ್ರಾರಂಭಿಸಿದರು ಎಂದು ಸೂಚಿಸುವುದು ಸರಿಯಲ್ಲ.

20. ಅದೇ ದಿನ ರಾತ್ರಿ 8-30 ಕ್ಕೆ 1 ನೇ ಆರೋಪಿಯನ್ನು ಬಂಕಾಪುರ ಕೆಇಬಿ ಕಛೇರಿಗೆ ಕರೆದುಕೊಂಡು ಬಂದು ದಸ್ತಗಿರೀ ಮಾಡಿ ಸ್ಯಾಮಸಂಗ ಕೀಪ್ಯಾಡ, ಸ್ಯಾಮಸಂಗ ಟಚಪ್ಯಾಡ, ಹಣ, ಆಧಾರ ಕಾರ್ಡ, ಡಿಎಲ್ ಕಾರ್ಡ, ಆರ್.ಸಿ. ಬುಕ್, ಬೈಕ್ ಕೀ ಪರಿಶೀಲಿಸಿ ವಾಪಾಸು ನೀಡಿ ಸ್ವೀಕೃತಿ

ಪಡೆದುಕೊಂಡಿರುತ್ತೇವೆ ಅಂತಾ ನಿಪಿ-4 ರಲ್ಲಿ ನಮೂದಿಸಲಾಗಿದೆ ಎಂದು ಸೂಚಿಸುವುದು ಸರಿಯಲ್ಲ. 1 ನೇ ಆರೋಪಿಯ ಸ್ವ-ರಕ್ಷಣಾ ಹೇಳಿಕೆಯನ್ನು ಪಡೆದಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ.

21. ಪೊಲೀಸರು ಆರೋಪಿ 1 ಮತ್ತು 2 ಮತ್ತು ಸಾಕ್ಷಿಯ ಸಂಭಾಷಣೆಯ ವಿವರವನ್ನು ನಿಪಿ-4 ರಲ್ಲಿ ವಿವರವಾಗಿ ನಮೂದಿಸಿ ಪಂಚನಾಮೆ ತಯಾರಿಸಿ ಫೋಟೋ ತೆಗೆದರು ಎಂದು ಸೂಚಿಸುವುದು ಸರಿಯಲ್ಲ. ನಿಪಿ-4 ನ್ನು ದಿನಾಂಕಃ9/8/2017 ರಂದು ಸಂಜೆ 6-20 ರಿಂದ ದಿನಾಂಕಃ10/8/2017 ರಂದು ಮಧ್ಯಾಹ್ನ 2-00 ಘಂಟೆಯವರೆಗೆ ನಮ್ಮ ಸಮಕ್ಷಮ ಪೊಲೀಸರು ಪಂಚನಾಮೆ ತಯಾರಿಸಿ, ಓದಿ ತಿಳಿದು ನಿಪಿ-4 ಕ್ಕೆ ಸಹಿ ಮಾಡಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ.

22. ದಿನಾಂಕಃ10/8/2017 ರಂದು ಮಧ್ಯಾಹ್ನ 11-45 ರಿಂದ 12-30 ಕ್ಕೆ ನಮಗೆ ಸೇರಿದ ಜಮೀನಿನಲ್ಲಿ ಪೊಲೀಸರು ನಮ್ಮ ಮತ್ತು ಪಂಚರ ಸಮಕ್ಷಮ ನಿಪಿ-3 ರಂತೆ ಪಂಚನಾಮೆ ಮಾಡಿ ಓದಿ ತಿಳಿದು ನಿಪಿ-3 ಕ್ಕೆ ಸಹಿ ಮಾಡಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ.

23. ನಿಪಿ-1 ರಿಂದ 4 ದಾಖಲೆಗಳ ವಿಷಯ ಗೊತ್ತಿದ್ದರೂ ಈಗ 1 ನೇ ಆರೋಪಿ ಜೊತೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಸಾಕ್ಷಿ ನುಡಿಯಲು ಯಾರೂ ಒತ್ತಾಯ ಮತ್ತು ಭಯ ಹಾಕಿರುವುದಿಲ್ಲ. ನಾನು ಸ್ವ-ಇಚ್ಛೆಯಿಂದ ಸಾಕ್ಷಿ ನುಡಿದಿರುತ್ತೇನೆ.

**ಪಾಟೀ ಸವಾಲುಃ 1 ನೇ ಆರೋಪಿ ಪರಃ ಶ್ರೀ ಯು.ಎನ್.ಜಿ. ವಕೀಲರಿಂದಃ–**

(ಈ ಸಾಕ್ಷಿಗೆ ಶ್ರೀ ಯು.ಎನ್.ಜಿ. ರವರು ಪಾಟೀ ಸವಾಲು ಇಲ್ಲ ಮನವಿ ಮಾಡಿರುತ್ತಾರೆ.)

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮತ್ತು ವಿಶೇಷ ನ್ಯಾಯಾಧೀಶರು, ಹಾವೇರಿ.